**ದಿನಾಂಕ:06-11-2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲು ವಾದಿ ಪರ ವಕೀಲರಾದ ಶ್ರೀ ಎಸ್.ಜಿ.ಜಿ. ರವರಿಂದಃ-**

ನಾನು ಪ್ರಥಮ ಪಿಯುಸಿವರೆಗೆ ಓದಿದ್ದೇನೆ. ಸುನಂದ ರವರು ನನ್ನ ತಾಯಿ. ಬಾಹುಬಲಿ ನನ್ನ ತಮ್ಮ. ಪದ್ಮಶ್ರೀ ರವರು ನನ್ನ ತಂಗಿ. ಚಂದ್ರವ್ವ ನನ್ನ ಅಜ್ಜಿ. ನಾನು ವ್ಯವಸಾಯ ಮಾಡುತ್ತೇನೆ. ನಾನು ಬಸ್ತವಾಡ ಗ್ರಾಮದಲ್ಲಿ ಖಾಯಂ ಆಗಿ ನನ್ನ ಅಣ್ಣತಮ್ಮಂದಿರು ಮತ್ತು ಅಜ್ಜಿಯೊಂದಿಗೆ ವಾಸಿಸುತ್ತೇನೆ. ಬೆಳಗಾವಿಯ ಸರ್ವೆ ನಂ.95/3 ರ ಒಟ್ಟು ಕ್ಷೇತ್ರ 9 ಎಕರೆ 15 ಗುಂಟೆ ಇದೆ ಎಂದರೆ ಸರಿ. ದಾವಾ ಸ್ವತ್ತು ಇದೇ ಸರ್ವೆ ನಂಬರಿನಲ್ಲಿ ಬರುತ್ತದೆ ಎಂದರೆ ಸರಿ. ಈಗ ಅದನ್ನು ಪ್ಲಾಟ್ ನಂ.13 ಎಂದು ಗುರುತಿಸಲಾಗಿದೆ ಎಂದರೆ ಸಾಕ್ಷಿ ಪೀರನವಾಡಿ ಪಂಚಾಯಿತಿ ದಾಖಲೆಗಳಲ್ಲಿ ಆಸ್ತಿ ಸಂಖ್ಯೆ 2295 ಎಂದು ಗುರುತಿಸಲಾಗಿದೆ ಎನ್ನುತ್ತಾರೆ. ಸರ್ವೆ ನಂ.95/3 ಬೆಳಗಾವಿಯ ಮಂಡೋಳಿ ರಸ್ತೆಯಲ್ಲಿದೆ ಎಂದರೆ ಸರಿ. ಈಗ ಅದು ಕಾರ್ಪೊರೇಷನ್ ವ್ಯಾಪ್ತಿಗೆ ಬರುತ್ತದೆ ಎಂದರೆ ಸರಿ, ಸಾಕ್ಷಿಯು 2008 ರಿಂದ ಕಾರ್ಪೊರೇಷನ್ ವ್ಯಾಪ್ತಿಗೆ ಒಳಪಟ್ಟಿದೆ ಎನ್ನುತ್ತಾರೆ. ವಾದ ಪತ್ರದಲ್ಲಿ ದಾವಾ ಸ್ವತ್ತಿನ ಚೆಕ್ಕುಬಂಧಿಯನ್ನು ಸರಿಯಾಗಿ ನಮೂದಿಸಲಾಗಿದೆ ಎಂದರೆ ಸರಿಯಲ್ಲ, ಸಾಕ್ಷಿಯು ಸುಳ್ಳಾಗಿ ನಮೂದಿಸಲಾಗಿದೆ ಎನ್ನುತ್ತಾರೆ. ವಾದ ಪತ್ರದಲ್ಲಿ ದಾವಾ ಸ್ವತ್ತಿನ ಸಂಖ್ಯೆಯನ್ನು ಪ್ಲಾಟ್ ನಂ.13 ಎಂದು ನಮೂದಿಸಲಾಗಿದೆ ಎಂದರೆ ಸಾಕ್ಷಿಯು ಸುಳ್ಳು ಎನ್ನುತ್ತಾರೆ. ಅದರ ಚೆಕ್ಕುಬಂಧಿಯನ್ನು ಪೂರ್ವಕ್ಕೆ ಗೇಣುಕಾಂಬ್ಳೆ, ಪಶ್ಚಿಮ ಮತ್ತು ದಕ್ಷಿಣಕ್ಕೆ ರಸ್ತೆ ಮತ್ತು ಉತ್ತರಕ್ಕೆ ಪ್ಲಾಟ್ ನಂ 14 ಎಂದು ನಮೂದಿಸಲಾಗಿದೆ ಎಂದರೆ ಸಾಕ್ಷಿಯು ಅದು ತಪ್ಪು ಎನ್ನುತ್ತಾರೆ.

**2.** ಗೋಪಾಲ್ ಜಿನ್ನಪ್ಪ ಮುದಕಪ್ಪಗೋಳ ಎಂದರೆ ನನ್ನ ತಂದೆ, ಅವರು 1 ನೇ ಪ್ರತಿವಾದಿ. ನನ್ನ ತಂದೆ ಮರಣಾನಂತರ ನಾವು ವಾರಸುದಾರರಾಗಿ ಬಂದು ನಮ್ಮ ಪ್ರತಿವಾದ ಪತ್ರವನ್ನು

ಸಲ್ಲಿಸಿದ್ದೇವೆ. ಪ್ರತಿವಾದ ಪತ್ರವನ್ನು ಸಲ್ಲಿಸಲು ಮಾಹಿತಿಯನ್ನು ನನ್ನ ತಂದೆಯವರು ನೀಡಿದ್ದರು. ಈ ದಾವೆಯಲ್ಲಿ ಪ್ರತಿವಾದ ಪತ್ರವನ್ನು ನನ್ನ ಸಹಿಯೊಂದಿಗೆ ಹಾಕಲಾಗಿದೆ ಎಂದರೆ ಸರಿ. ಪ್ರತಿವಾದ ಪತ್ರ ಸಲ್ಲಿಸುವ ಸಮಯದಲ್ಲಿ ಅದರಲ್ಲಿ ಬರೆದಿರುವ ಸಂಗತಿಗಳನ್ನು ಓದಿ ಸಹಿ ಮಾಡಿದ್ದೇನೆ ಎಂದರೆ ಸರಿ. ಸರ್ವೆ ನಂ.95/3 ಮೊದಲು ಜೋಗ್ ರವರಿಗೆ ಸೇರಿತ್ತು ಎಂದು ಬರೆಯಲಾಗಿದೆ ಎಂದರೆ ಸರಿ. ಆ ಸರ್ವೆ ನಂಬರಿನಲ್ಲಿ ಓಮಣ್ಣ ಪಾಟೀಲ್ ರವರು ಕೂಳ್ ಎಂದು ಇದ್ದರು ಎಂದರೆ ಸರಿ. ಓಮಣ್ಣ ಪಾಟೀಲ್ ರವರು ಸುಭಾಷ್ ರವರ ತಂದೆ ಎಂದರೆ ಸರಿ. Land Reforms Act ಬಂದ ನಂತರ ಓಮಣ್ಣ ಪಾಟೀಲ್ ರವರು Land Tribunal ಗೆ ಅರ್ಜಿ ಸಲ್ಲಿಸಿದ್ದರು, ಆ ಪ್ರಕಾರ ಸದರಿ ಸ್ವತ್ತು ಅವರಿಗೆ ಮಂಜೂರಾಗಿತ್ತು ಎಂದರೆ ಸರಿ. ಸರ್ವೆ ನಂ.95/3 ಯಾವಾಗ ಎನ್.ಎ ಆಗಿ ಬದಲಾಯಿತು ಎಂದರೆ ಸಾಕ್ಷಿಯು ಆ ಜಮೀನು ಎನ್.ಎ ಆಗಿಲ್ಲ ಎನ್ನುತ್ತಾರೆ. ಸರ್ವೆ ನಂ.95/3 ಎನ್.ಎ ಆಗಿದ್ದರ ಬಗ್ಗೆ ನಾನು ವೈಯಕ್ತಿಕವಾಗಿ ಚೌಕಾಸಿ ಮಾಡಿಲ್ಲ ಎಂದರೆ ಸಾಕ್ಷಿ ನಾನು ಚೌಕಾಸಿ ಮಾಡಿದ್ದೇನೆ, ಅದು ಎನ್.ಎ ಆಗಿಲ್ಲ ಎನ್ನುತ್ತಾರೆ.

3. Deputy Commissioner ರವರು ಸರ್ವೆ ನಂ.95/3 ನ್ನು ದಿನಾಂಕ 09.04.1985 ರಲ್ಲಿ ಎನ್.ಎ ಆಗಿ ಬದಲಾಯಿಸಿದ್ದಾರೆ ಎಂದರೆ ಸಾಕ್ಷಿ ಎನ್.ಎ ಆಗಿಲ್ಲ ಎನ್ನುತ್ತಾರೆ. ಆ ಜಮೀನು ಎನ್.ಎ ಆಗಿಲ್ಲ ಎಂದು ಯಾವುದೇ ಪ್ರಮಾಣ ಪತ್ರವನ್ನು ನಾನು ಪಡೆದಿಲ್ಲ ಎಂದರೆ ಸಾಕ್ಷಿ ಚೌಕಾಸಿ ಮಾಡಿದ್ದೇನೆ, ಪ್ರಮಾಣ ಪತ್ರ ಪಡೆದಿಲ್ಲ ಎನ್ನುತ್ತಾರೆ. ಸರ್ವೆ ನಂ.95/3 ರಲ್ಲಿ ಬಹಳಷ್ಟು ಮನೆಗಳು ಮತ್ತು ನಿವೇಶನಗಳು ಆಗಿವೆ ಎಂದರೆ ಸರಿ. ಮನೆಗಳೆಲ್ಲವೂ ಆರ್.ಸಿ.ಸಿ ಕಟ್ಟಡಗಳು ಎಂದರೆ ಸರಿ. ಆರ್.ಸಿ.ಸಿ ಕಟ್ಟಡ ಆಗಬೇಕೆಂದರೆ ಎನ್.ಎ. ಆಗಿರಬೇಕು ಮತ್ತು ಪರವಾನಗಿ ಪಡೆದಿರಬೇಕು ಎಂದರೆ ಸಾಕ್ಷಿ unauthorized ಆಗಿ ಕಟ್ಟಿದ್ದಾರೆ ಎನ್ನುತ್ತಾರೆ. ಕಟ್ಟಡ ಕಟ್ಟಿದವರು ಪರವನಾಗಿ ಪಡೆದಿದ್ದಾರೋ ಇಲ್ಲವೋ ಎಂದು ನಾನು ಚೌಕಾಸಿ ಮಾಡಿ ತಿಳಿದುಕೊಂಡಿದ್ದೇನೆ. ನನ್ನ ತಂದೆ ಬದುಕಿದ್ದಾಗ ನಾವು ಅಲ್ಲಿ ವಾಸವಿದ್ದ ವಿಚಾರ

ಮಾಡಿದಾಗ ಅವರು ನಾವು ಯಾವುದೇ ಪರವಾನಗಿ ಇಲ್ಲದೆ ಕಟ್ಟಿದ್ದೇವೆ ಎಂದು ತಿಳಿಸಿರುತ್ತಾರೆ ಎನ್ನುತ್ತಾರೆ. ನನ್ನ ತಂದೆಯೊಂದಿಗೆ ಸುಮಾರು 8 ವರ್ಷಗಳ ಹಿಂದೆ ಚೌಕಾಸಿ ಮಾಡಲು ಹೋಗಿದ್ದೆ ಮತ್ತು ಈಗ ಸ್ವಲ್ಪ ದಿನಗಳ ಹಿಂದೆಯೂ ಸಹ ಚೌಕಾಸಿ ಮಾಡಿದ್ದೇನೆ ಎನ್ನುತ್ತಾರೆ. ಕಾರ್ಪೊರೇಷನ್ ರವರು ಸದರಿ unauthorized ಕಟ್ಟಡಗಳ ಬಗ್ಗೆ ಯಾವುದೇ ಕ್ರಮ ಕೈಗೊಂಡಿಲ್ಲ ಎಂದರೆ ಸರಿ.

**4.** ಓಮಣ್ಣ ಪಾಟೀಲ್ ರವರ ಮಗ ಸುಭಾಷ್ ರವರು ವಾದಿಗೆ ದಿನಾಂಕ 16.09.2010 ರಂದು ನೊಂದಾಯಿತ ಕ್ರಯ ಪತ್ರದ ಮೂಲಕ ದಾವಾ ಸ್ವತ್ತನ್ನು ಬರೆದುಕೊಟ್ಟಿದ್ದಾರೆ ಎಂದರೆ ಸಾಕ್ಷಿ ಖೊಟ್ಟಿ ದಾಖಲೆಯನ್ನು ಸೃಷ್ಟಿಸಿದ್ದಾರೆ ಎನ್ನುತ್ತಾರೆ. ಆ ಪ್ರಕಾರ ಕಾರ್ಪೊರೇಷನ್ ದಾಖಲೆಯಲ್ಲಿ ವಾದಿಯ ಹೆಸರನ್ನು ನಮೂದಿಸಲಾಗಿದೆ ಎಂದರೆ ಸಾಕ್ಷಿ ಅದಕ್ಕೂ ಮೊದಲು ಪಂಚಾಯಿತಿ ದಾಖಲೆಗಳಲ್ಲಿ ನಮ್ಮ ಹೆಸರನ್ನು ನಮೂದಿಸಲಾಗಿತ್ತು ಎನ್ನುತ್ತಾರೆ, ಮುಂದುವರೆದು ಖೊಟ್ಟಿ ದಾಖಲೆಯನ್ನು ಸೃಷ್ಟಿಸಿದ್ದಾರೆ ಎನ್ನುತ್ತಾರೆ. ವಾದಿಯರು ಈ ದಾವೆಯಲ್ಲಿ ಯಾವ ಯಾವ ದಾಖಲೆಗಳನ್ನು ಹಾಜರುಪಡಿಸಿದ್ದಾರೆ ಎಂದು ನಾನು ನೋಡಿದ್ದೇನೆ, ಆದರೆ ನೆನಪಿಲ್ಲ ಎನ್ನುತ್ತಾರೆ. ವಾದಿಯರ ನೊಂದಾಯಿತ ಕ್ರಯಪತ್ರ ಖೊಟ್ಟಿ ದಾಖಲೆ ಎಂದು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸಿಲ್ಲ ಎಂದರೆ ಸರಿ. ವಾದಿಗೆ ದಾವಾ ಸ್ವತ್ತು ನೊಂದಾಯಿತ ಕ್ರಯಪತ್ರದ ಮೂಲಕ ಬಂದಿದ್ದು ಅವರೇ ದಾವಾ ಸ್ವತ್ತಿನ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ, ಸಾಕ್ಷಿ ಮೊದಲು ನಾವೇ ಕಬ್ಜೆಯಲ್ಲಿದ್ದೆವು, ಈಗಲೂ ಸಹ ನಾವೇ ಕಬ್ಜೆಯಲ್ಲಿ ಇದ್ದೇವೆ ಎನ್ನುತ್ತಾರೆ. ದಾವಾ ಸ್ವತ್ತು ನಮ್ಮ ಕಬ್ಜೆಯಲ್ಲಿದೆ ಎಂದು ತೋರಿಸಲು ಈಗ ಹಾಜರುಪಡಿಸಿರುವ ದಾಖಲೆಗಳನ್ನು ಹೊರತುಪಡಿಸಿ ಬೇರೆ ದಾಖಲೆಗಳು ಇಲ್ಲ ಎಂದರೆ ಸಾಕ್ಷಿ ನಮ್ಮ ತಂದೆಯ ಹೆಸರಿಗೆ ಆದ ಕ್ರಯಪತ್ರವನ್ನು ನನ್ನ ತಂದೆ ನಮಗೆ ತೋರಿಸಿದ್ದರು, ಅವರ ಮರಣಾನಂತರ ಆ ಕ್ರಯಪತ್ರ ಸಿಗುತ್ತಿಲ್ಲ ಎನ್ನುತ್ತಾರೆ. ದಾವಾ ಸ್ವತ್ತನ್ನು ನಿಮ್ಮ ತಂದೆಯವರು ನೊಂದಾಯಿತ ಕ್ರಯಪತ್ರದ ಮೂಲಕ ಮಾಡಿಕೊಂಡಿದ್ದರೇ ಎಂದು ಪ್ರಶ್ನಿಸಿದರೆ ಸಾಕ್ಷಿಯು ನೊಂದಾಯಿತ ಕ್ರಯಪತ್ರದ ಮೂಲಕ ಮಾಡಿಕೊಂಡಿರಬಹುದು,

ನನ್ನ ತಂದೆ ಎಲ್ಲಾ ವ್ಯವಹಾರ ನೊಡಿಕೊಳ್ಳುತ್ತಿದ್ದರು ಎನ್ನುತ್ತಾರೆ. ದಾವಾ ಸ್ವತ್ತನ್ನು ನಿಮ್ಮ ತಂದೆಯವರು ಯಾವ ದಿನಾಂಕದಂದು ಖರೀದಿಸಿದ್ದರು ಎಂದರೆ ಸಾಕ್ಷಿಯು 1990 ರಿಂದ 1992 ರ ಅವಧಿಯಲ್ಲಿ ಮಾಡಿಕೊಂಡಿದ್ದರು ಎನ್ನುತ್ತಾರೆ. ಯಾವುದೇ ಕ್ರಯಪತ್ರ ನೊಂದಾಯಿತವಾದಾಗ ಅದರ ಪ್ರತಿಯನ್ನು ಉಪ ನೊಂದಣಧಿಕಾರಿ ಕಛೇರಿಯಲ್ಲಿ ಪಡೆಯಬಹುದು ಎಂದರೆ ಸರಿ. ದಾವಾ ಸ್ವತ್ತನ್ನು ನನ್ನ ತಂದೆಯವರು ಖರೀದಿಸಿದ ನೊಂದಾಯಿತ ಕ್ರಯಪತ್ರದ ದೃಡೀಕೃತ ಪ್ರತಿಯನ್ನು ಪಡೆಯಲು ನಾನು ಪ್ರಯತ್ನಿಸಿಲ್ಲ. ನೊಂದಾಯಿತ ಕ್ರಯಪತ್ರದ ದೃಡೀಕೃತ ಪ್ರತಿಯನ್ನು ಪಡೆಯಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ನಾನು ಪ್ರಯತ್ನ ಮಾಡಿಲ್ಲ ಎನ್ನುತ್ತಾರೆ.

**5.** ದಶರಥ ರವರು ನನ್ನ ಚಿಕ್ಕಪ್ಪ. ಅವರು ಈಗ ಬೆಳಗಾವಿಯಲ್ಲಿ ವಾಸವಾಗಿದ್ದಾರೆ. ಅವರು ನಿವೃತ್ತ ಶಿಕ್ಷಕರು. ಪ್ರತಿವಾದ ಪತ್ರದಲ್ಲಿ ದಾವಾ ಸ್ವತ್ತನ್ನು ನನ್ನ ಚಿಕ್ಕಪ್ಪ ದಶರಥ ರವರು ಪಾಟೀಲ್ ರವರಿಂದ ಖರೀದಿಸಿದ್ದರು ಎಂದು ಬರೆಯಲಾಗಿದೆ ಎಂದರೆ ಸರಿ. ಪ್ರತಿವಾದ ಪತ್ರದ ಪ್ರಕಾರ ದಾವಾ ಸ್ವತ್ತನ್ನು ನಿಮ್ಮ ತಂದೆ ಖರೀದಿಸಿಲ್ಲ ಎಂದರೆ ಸಾಕ್ಷಿ ಒಟ್ಟು ಕುಟುಬಂದಲ್ಲಿದ್ದಾಗ ಖರೀದಿಸಿರುತ್ತಾರೆ ಎನ್ನುತ್ತಾರೆ. ಯಾವ ದಿನಾಂಕದಂದು ದಾವಾ ಸ್ವತ್ತನ್ನು ಖರೀದಿಸಲಾಗಿದೆ ಎಂದು ನಿಮ್ಮ ಚಿಕ್ಕಪ್ಪರವರನ್ನು ಚೌಕಾಸಿ ಮಾಡಿದ್ದೀರಾ ಎಂದರೆ ಸಾಕ್ಷಿ ನನ್ನ ತಂದೆ ಎಲ್ಲಾ ವ್ಯವಹಾರ ನೋಡಿಕೊಳ್ಳುತ್ತಿದ್ದರಿಂದ ನಾನು ಆ ಬಗ್ಗೆ ತಿಳಿದುಕೊಂಡಿಲ್ಲ ಎನ್ನುತ್ತಾರೆ. ಪ್ರತಿವಾದ ಪತ್ರದ ಮಾಹಿತಿಯನ್ನು ನನ್ನ ತಂದೆ ನೀಡಿದ ಪ್ರಕಾರ ಬರೆಯಲಾಗಿದೆ ಎಂದರೆ ಸರಿ. ದಾವಾ ಸ್ವತ್ತಿನ ಬಗ್ಗೆ ಇಲ್ಲಿಯವರೆಗೂ ನಿಮ್ಮ ಚಿಕ್ಕಪ್ಪ ದಶರಥ ರವರೊಂದಿಗೆ ಚೌಕಾಸಿ ಮಾಡಿಲ್ಲ ಎಂದರೆ ಸರಿ. ನಿಡಿ-1 ಮತ್ತು 2 ರಲ್ಲಿ ಸರ್ವೆ ನಂ.95 ಎಂದು ಮಾತ್ರ ಬರೆಯಲಾಗಿದೆ, ಸರ್ವೆ ನಂ.95/3 ಎಂದು ನಮೂದಿಸಿಲ್ಲ ಎಂದರೆ ಸರಿ. ನಿಡಿ-2 ರಲ್ಲಿ ಮಾಲೀಕರ ಹೆಸರನ್ನು ಅಪ್ಪಣ್ಣ ಎಸ್ ಬೋಯಿ ಎಂದು ನಮೂದಿಸಲಾಗಿದೆ ಎಂದರೆ ಸರಿ. ಎರಡೂ ದಾಖಲೆಗಳಲ್ಲಿ ನಿಮ್ಮ ತಂದೆ ಹೆಸರು ಮತ್ತು ದಶರಥ ರವರು ಖರೀದಿಸಿದ ಬಗ್ಗೆ ನಮೂದಿಸಿಲ್ಲ ಎಂದರೆ ಸರಿ. ದಾವಾ ಸ್ವತ್ತು ಈಗಲೂ ಖಾಲಿ ಜಾಗ

ಎಂದರೆ ಸರಿ. ದಾವಾ ಸ್ವತ್ತಿನ ತೆರಿಗೆಯನ್ನು ಕಾರ್ಪೊರೇಷನ್ ಗೆ ವಾದಿಯರೇ ತುಂಬುತ್ತಾ ಬಂದಿದ್ದಾರೆ ಎಂದರೆ ಸಾಕ್ಷಿ ಅವೆಲ್ಲಾ ಖೊಟ್ಟಿ ದಾಖಲೆಗಳು ಎನ್ನುತ್ತಾರೆ. ದಾವಾ ಸ್ವತ್ತಿನ ತೆರಿಗೆಯನ್ನು ನನ್ನ ತಂದೆ ಅಥವಾ ನಾನು ಕಾರ್ಪೊರೇಷನ್ ಗೆ ತುಂಬಿಲ್ಲ ಎಂದರೆ ಸಾಕ್ಷಿ ಪಂಚಾಯಿತಿಗೆ ತುಂಬಿದ್ದೇವೆ ಎನ್ನುತ್ತಾರೆ. ದಾವಾ ಸ್ವತ್ತಿನ ಮಾಲೀಕರು ವಾದಿ ಆಗಿದ್ದು ಅವರೇ ಕಬ್ಜೆಯಲ್ಲಿದ್ದಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ನನ್ನ ತಂದೆ ಖರೀದಿಸಿದ್ದರು ಮತ್ತು ನಾವು ಕಬ್ಜೆಯಲ್ಲಿದೇವೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ದಾವಾ ಸ್ವತ್ತು ನಮ್ಮ ಮಾಲೀಕತ್ವದ್ದು ಮತ್ತು ನಾವೇ ಕಬ್ಜೆಯಲ್ಲಿದೇವೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಚಿಕ್ಕಪ್ಪ ಈಗಲೂ ಜೀವಂತ ಇದ್ದಾರೆ.

**ಮರು ವಿಚಾರಣೆ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**Sd/-**

**3 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು,**
**ಬೆಳಗಾವಿ.**